# ಮರಕೆತ್ತನೆ ಕಲಾ ಶಿಬಿರಕ್ಕೆ ತೆರೆ




ಕಳೆದ ನಾಲ್ಕುದಿನಗಳಿಂದ ನಡೆದ ಮರಕೆತ್ತನೆಯ ಕಲಾ ಶಿಬಿರಕ್ಕೆ ಸೋಮವಾರದಂದು ತೆರೆಯೆಳೆಯಲಾಯಿತು. ಸೈನಿಕ ಶಾಲೆಯ ಎನ್ ಡಿ ಎ ಬ್ಲಾಕ್ ನಲ್ಲಿ ಆಯೋಜಿಸಲಾಗಿದ್ದ ಶಿಬಿರದಲ್ಲಿ 30 ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿ ತರಬೇತಿಯನ್ನು ಪಡೆದರು.

ಮರಕೆತ್ತನೆ ಕಲೆಯಲ್ಲಿ ನಿಪುಣರಾದ ಚಂದ್ರಹಾಸ ಜಾಲಿಹಾಳ ಅವರು ಸಂಪನ್ಮೂಲವ್ಯಕ್ತಿಗಳಾಗಿ, ನಯನಾ ಮತ್ತು ಪೂಜಾ ಅವರು ಸಹಾಯಕರಾಗಿ ವಿದ್ಯಾರ್ಥಿಗಳಿಗೆ ಯೋಗ್ಯ ತರಬೇತಿ ನೀಡೀದರು. ವಿದ್ಯಾರ್ಥಿಗಳು ಸಪಾಟಾದ ಮರದ ಹಲಗೆಯನ್ನು ಕೊರೆದು ಸುಮಾರು 45 ಕ್ಕೂ ಹೆಚ್ಚು ಅಚ್ಚುಗಳನ್ನು ಸಿದ್ಧಪಡಿಸಿದರು. ಆ ಅಚ್ಚಿನ ಸಹಾಯದಿಂದ ಬಿಳಿ ಹಾಳೆಗಳ ಮೇಲೆ ವರ್ಣರಂಜಿತವಾಗಿ ಮುದ್ರಿಸಿ ಸಂಭ್ರಮಿಸಿದರು.

ಮುಕ್ತಾಯ ಸಮಾರಂಭದಲ್ಲಿ ಚಂದ್ರಹಾಸ ಜಾಲಿಹಾಳ ಮಾತನಾಡಿ, ತಾವು ರಾಜ್ಯಮಟ್ಟದ, ರಾಷ್ಟ್ರಮಟ್ಟದ ಅನೇಕ ಶಿಬಿರಗಳಲ್ಲಿ ಸಂಪನ್ಮೂಲವ್ಯಕ್ತಿಯಾಗಿ ಭಾಗವಹಿಸಿದ್ದೆ ಆದರೆ ಸೈನಿಕ ಶಾಲೆಯ ಶಿಬಿರವು ತಮಗೆ ವಿಶೇಷ ಅನುಭವ ನೀಡಿತು. ಇಲ್ಲಿಯ ವಿದ್ಯಾರ್ಥಿಗಳು ಅತ್ಯಂತ ಚುರುಕಾಗಿದ್ದು ಸೂಕ್ಷ್ಮಮತಿಗಳಾಗಿದ್ದಾರೆ. ಇವರಲ್ಲಿ ಒಳ್ಳೆಯ ಕಲ್ಪನಾಶಕ್ತಿಯಿರುವದು ಹಾಗೂಅದನ್ನು ಕಲೆಯಲ್ಲಿ ಅಳವಡಿಸುವಲ್ಲಿಯೂ ನಿಪುಣರಾಗಿರುವರೆಂದು ಹೇಳಿದರು.

ನಂತರ ಸೈನಿಕ ಶಾಲೆಯ ಪ್ರಾಚಾರ್ಯ ಕರ್ನಲ್ ತಮೋಜಿತ್ ಬಿಸ್ವಾಸ ಮಾತನಾಡಿ ತರಬೇತಿಯ ಸಂದರ್ಭದಲ್ಲಿ ಕಲಿತ ಈ ವಿಶೇಷ ಕಲೆಯನ್ನು ಮುಂದುವರೆಸಿಕೊಂಡು ಹೋಗಬೇಕು ಮತ್ತು ಇತರರಿಗೂ ಇಂತಹ ಲಲಿತ ಕಲೆಗಳಲ್ಲಿ ಆಸಕ್ತಿ ಹುಟ್ಟುವಂತೆ ಮಾಡಬೇಕೆಂದು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಕಲಾ ಶಿಬಿರದ ಸಂಚಾಲಕಿ ಡಾ. ಶಶಿಕಲಾ ಹೂಗಾರ ತರಬೇತಿಯ ಬೆನ್ನೆಲುಬಾಗಿ ನಿಂತು ಕಾರ್ಯ ನಿರ್ವಹಿಸಿದರು. ಮುಕ್ತಾಯ ಸಮಾರಂಭದಲ್ಲಿ ಶಾಲೆಯ ಉಪಪ್ರಾಚಾರ್ಯ ಸ್ಕ್ವಾಡರ್ನ್ ಲೀಡರ್ ಕೆ ಜೆ ಎಮ್ ರೆಡ್ಡಿ, ಆಡಳಿತಾಧಿಕಾರಿ ಸ್ಕ್ವಾಡರ್ನ್ ಲೀಡರ್ ಎ ಮುರುಳೀಧರನ್, ಹಿರಿಯ ಗುರುಗಳಾದ ಜಿ ಶ್ರೀರಾಮಮೂರ್ತಿ, ಸಿಬ್ಬಂದಿಯವರು ಹಾಗೂ ಚಿತ್ರಕಲಾ ವಿಭಾಗದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.